1

# ಮುನ್ನುಡಿ (1 ಪೇತ್ರ)

1 ಪೇತ್ರ ಒಂದರಲ್ಲಿ ಈ ಕೆಳಕಂಡ ಎರಡು ವಿಷಯಗಳನ್ನು ಒತ್ತಿ ಹೇಳಲಾಗಿದೆ. ಮೊದಲನೆಯದಾಗಿ, ನಂಬಿಕೆಗೋಸ್ಕರ ಕಷ್ಟವನ್ನು ಅನುಭವಿಸುತ್ತಿದ್ದಂತ ಕ್ರೈಸ್ತರಿಗೆ ಪೇತ್ರನು ಪ್ರೋತ್ಸಾಹವನ್ನು ನೀಡುತ್ತಿದ್ದನು. ಆದರಿಂದ ದೂರವಾಗುವಂಥದ್ದು ಹತ್ತಿರವಾಗುತ್ತಿದ್ದರಿಂದ, ಇದನ್ನು ಸ್ಪಷ್ಟವಾಗಿ 1:6-9, 3:13-17, 4:12-19, ಮತ್ತು 5:9, 10ರಲ್ಲಿ ನೋಡುತ್ತೇವೆ. ಎರಡನೆಯ ವಿಷಯ ಸ್ಪಷ್ಟವಾಗಿ ಇರುವಂಥದ್ದು: "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ; ಆದದರಿಂದ ನೀವು ಜಿತೇಂದ್ರಿಯರಾಗಿಯೂ ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತ ರಾಗಿಯೂ ಇರ್ರಿ" (1 ಪೇತ್ರ 4:7). 1:7ರಲ್ಲಿ ಈ ಎರಡು ವಿಷಯಗಳು ಒಟ್ಟಾಗಿ ಸೇರುತ್ತವೆ. ಪೇತ್ರನು ಹೇಳಿದ್ದೇನೆಂದರೆ, "ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು" "ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ, ಪ್ರಭಾವ ಮಾನಗಳನ್ನು ಉಂಟುಮಾಡುವದು." ಕಷ್ಟಗಳನ್ನು ಹಿಂಸೆಗಳನ್ನು ಹೇಗೆ ಸಹಿಸಕೊಳ್ಳಬೇಕು ಎಂದು ಪೇತ್ರನು ಬೋಧಿಸುತ್ತಿದ್ದಾನೆ. ಅವನು ಅವರಿಗೆ ಕರ್ತನ ಬರೋಣವು ಸಮೀಪವಾ ಗಿರುವದರಿಂದ ಅವರು ಜಯಹೊಂದುವರು ಎಂದು ಒತ್ತಿ ಹೇಳುತ್ತಿದ್ದಾನೆ.

ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳ ಮೂಲಕ ಪೇತ್ರನ ಬೋಧನೆಗಳನ್ನು ತಿಳಿದವ ರಾಗಿದ್ದೇವೆ. ಅವನು ಶಿಷ್ಯತ್ವದ ಬಗ್ಗೆ ಬೋಧಿಸಿದ ಬೋಧನೆಗಳನ್ನು ಪುನರಾವರ್ತಿಸುವುದು ಅವಶ್ಯವಿರುವದಿಲ್ಲ. (ಮತ್ತಾಯ 4:18-22; 14:22-33; 16:13-23; 17:1-8; 26:31-46, 69-75 ನೋಡಿರಿ.) ಪಂಚಾಶತ್ತಮ ದಿನದಂದು ಸಭೆಯು ಸ್ಥಾಪಿಸಲ್ಪಟ್ಟಿತು, ಅನಂತರ ಪೇತ್ರನ ನಾಯಕತ್ವದ ಗುಣಗಳು ಎದ್ದು ಕಾಣುತ್ತಿತ್ತು. ಶಿಷ್ಯರು ಅನಿಶ್ಚಿತತೆಗೆ ಒಳಗಾದಾಗ, ಅವರನ್ನು ವಿಭಾಗಿಸುವಂಥ ಪ್ರಶ್ನೆಗಳು ಉದ್ಭವಿಸುವಾಗ, ಕ್ರೈಸ್ತರು ಹಿಂಸೆಗೊಳಗಾಗಿ ಮರಣಕ್ಕೆ ಒಪ್ಪಿಸಲ್ಪಟ್ಟಾಗ, ಪೇತ್ರನು ಅವರಿಗೆ ಕಂಬದಂತಿದ್ದು, ಧೈರ್ಯದ ಗೋಪುರವಾಗಿದ್ದನು. (ಅಪೊಸ್ತಲರಕೃತ್ಯಗಳು 1:15, 16; 2:14-39; 3:1-26; 4:1-22; 9:32-43; 10:1-48 ನೋಡಿರಿ.) ಅಪೊಸ್ತಲರಲ್ಲಿ ಪೇತ್ರನ ನಾಯಕತ್ವದ ಪಾತ್ರ ಹೆಚ್ಚಾಗಿದ್ದರಿಂದ ಹೊಸ ಒಡಂಬಡಿಕೆಯಲ್ಲಿ ಬಹಳಷ್ಟು ಭಾಗಗಳನ್ನು ಪೇತ್ರನೇ ಬರೆಯಬಹುದಾಗಿತ್ತು. ಪೇತ್ರನ ಬರವಣಿಗೆಯನ್ನು ಪೌಲನ ಮತ್ತು ಯೋಹಾನನ ಬರವಣಿಗೆಗೆ ಹೋಲಿಸಲು ಸಾಧ್ಯವಿಲ್ಲ, ಏಕೆಂದರೆ ಪೇತ್ರನ ಈ ಎರಡು ಚಿಕ್ಕ ಪತ್ರಗಳು ಕ್ರಿಸ್ತನ ಮತ್ತು ಆತನ ಜನರ ನಡುವಿನ ಸಂಬಂಧದ ಕುರಿತಾಗಿ ಇತರೆ ಪತ್ರಗಳಲ್ಲಿ ನಮೂದಿಸಿರುವದಕ್ಕಿಂತಲೂ ಇಲ್ಲಿ ಹೆಚ್ಚಾಗಿ ನಮೂದಿಸಲಾಗಿದೆ.

ಯಾಕೆ ಪೇತ್ರನು ಈ ಪುಸ್ತಕವನ್ನು ಬರೆದನು? ಅವನು ಯಾವ ಕ್ರೈಸ್ತರ ಕುರಿತಾಗಿ ಬರೆ ದನು, ಅವರು ಎಲ್ಲಿ ವಾಸಿಸಿದ್ದರು, ಅವರ ಹಿಂಸೆಯ ಬಗ್ಗೆ ಪೇತ್ರನಿಗೆ ಹೇಗೆ ತಿಳಿದು ಬಂತು? ಈ ಪತ್ರವನ್ನು ಬರೆದಾಗ ಅವನು ಎಲ್ಲಿ ವಾಸವಾಗಿದ್ದನು, ಅವನು ಯಾವ ಪರಿಸ್ಥಿತಿಯಲ್ಲಿ ಇದ್ದನು? ಪತ್ರವು ತನ್ನ ಸಂದೇಶವನ್ನು ತೆರೆದು ನಮಗೆ ತೋರಿಸುತ್ತದೆ. ನಾವು ಮೊದಲ ಶತಮಾನದಲ್ಲಿದ್ದ ಪೇತ್ರ ಮತ್ತು ಅವನು ಯಾವ ಕ್ರೈಸ್ತರಿಗೆ ಬರೆದನೋ ಅವರೊಂದಿಗೆ ನಮ್ಮನ್ನು ಸೇರಿಸಿಕೊಂಡರೆ, ಈ ಪತ್ರದಲ್ಲಿ ತೋರಿರುವ ಧೈರ್ಯದ ನಿರೀಕ್ಷೆ ಮತ್ತು ಸಂತೋಷ ನಮ್ಮದಾಗುತ್ತದೆ.

## ಈ ಪತ್ರವನ್ನು ಬರೆದಿರುವ ಕಾರಣ

ಅಪೊಸ್ತಲಕೃತ್ಯದ ಒಂದನೆಯ ಅಧ್ಯಾಯದ ನಂತರ, ಪೇತ್ರನ ಪ್ರಸಂಗದ ಕುರಿತಾಗಲಿ

ಅವನ ಕೆಲಸದ ಕುರಿತಾಗಲೀ ಅಲ್ಪವಾಗಿ ಮಾತ್ರ ಗಮನಿಸುತ್ತೇವೆ. ವಿರಳವಾಗಿ ಅವನ ಹೆಸರನ್ನು ನೋಡುತ್ತೇವೆ. ಅವನು ಅಂತಿಯೋಕ್ಯದಲ್ಲಿದ್ದನು ಎಂದು ಪೌಲನು ಗಲಾತ್ಯ ಪತ್ರಿಕೆಯಲ್ಲಿ ತಿಳಿಸಿದ್ದಾನೆ (ಗಲಾತ್ಯ 2:11), ಮತ್ತು ಅವನು ಕೊರಿಂಥದಲ್ಲಿದ್ದನು ಎಂದು (1 ಕೊರಿಂಥ 1:12)ರಲ್ಲಿ ನೋಡುತ್ತೇವೆ. ಅವನ ಕುರಿತು ಅಲ್ಪವಾಗಿ ತಿಳಿದರೂ, ಸಹ ಅವನು ಕೆಲಸದಲ್ಲಿ ನಿರತನಗಿದ್ದನು ಎಂದು ತಿಳಿಯುತ್ತೇವೆ. ಪೌಲನ ಹಾಗೆ, ಪೇತ್ರನ ಸುವಾರ್ತಿಕ ಪ್ರಯಾಣವೂ, ಮುಂದುವರಿದಿತ್ತು ಎಂದು ತಿಳಿಯುತ್ತೇವೆ. 1 ಪೇತ್ರ 1:1ರಲ್ಲಿ ಅವನ ಸುವಾರ್ತಾ ಪಯಣವು ಎಲ್ಲಿಯವರಿಗೂ ಹಬ್ಬಿತು ಎಂದು ತಿಳಿಯುತ್ತೇವೆ.

ಸಹಜವಾಗಿ ಕ್ರಿ.ಶ. 60ರ ಮದ್ಯದಲ್ಲಿ ಪೇತ್ರ ಮತ್ತು ಪೌಲರು ಒತ್ತಾಯ ಪೂರ್ವಕ ವಾಗಿ ರೋಮಾಪುರಕ್ಕೆ ಒಯ್ಯಲ್ಪಟ್ಟರು. 1 ಕ್ಲೆಮೆಂಟ್ ಎಂಬ ಪತ್ರವನ್ನು ಕ್ರಿ.ಶ 90ರ ಮದ್ಯದಲ್ಲಿ ರೋಮಾಪುರದಿಂದ, ಕೊರಿಂಥಕ್ಕೆ ಕಳುಹಿಸಲಾಗಿತ್ತು. ಆ ಸಮಯದಲ್ಲಿ ಅವರಿಬ್ಬರೂ ರೋಮಾಪುರದಲ್ಲಿ ಮರಣಹೊಂದಿದರು. ಪೌಲನು ತನ್ನ ಕಡೆಯ ಪತ್ರವಾದ ಎರಡು ತಿಮೊಥೆಯನ್ನು ರೋಮಾಪುರದಿಂದ ಬರೆದಿದ್ದನು. 1 ಪೇತ್ರ 5:13 ಬ್ಯಾಬಿಲೋನಿಯದ ಊಹೆಯನ್ನು ನೋಡುತ್ತೇವೆ. ಅಲ್ಲಿ ಪಟ್ಟಣದ ಕುರಿತಾಗಿ ಗ್ರಂಥಕರ್ತನು ವಿವರಿಸಿದ್ದಾನೆ. ಏನೇ ಆದರೂ, ರೋಮಾಪುರವನ್ನು ಪ್ರಕಟನೆಯಲ್ಲಿ ಬಾಬೆಲ ಎಂದು ಕರೆಯಲಾಗಿದೆ (ಪ್ರಕಟಣೆ 17:5, 18), 1 ಪೇತ್ರದಲ್ಲಿ ನಮೂದಿಸಿರುವ ಕೆಲವು ಸಭೆಗಳನ್ನೇ ಪ್ರಕಟನೆಯಲ್ಲೂ ಹೆಸರಿಸಲಾಗಿದೆ. ಬಾಬಿಲೋನ್ ಎಂದು ನಮೂದಿಸಿರುವದರಿಂದ, ಈ ಸಮಯದಲ್ಲಿ ಪೇತ್ರನು ರೋಮಾಪುರದಲ್ಲಿ ಇದ್ದನು ಎಂದು ತಿಳಿಯುತ್ತೇವೆ. ಕ್ರಿ.ಶ. 67ರಲ್ಲಿ; ಬಹುಶಃ ಅವನು ರಕ್ತ ಸಾಕ್ಷಿಯಾಗಿದ್ದನು, ಅವನ ಮರಣದ ಎರಡು ವರುಷಗಳ ಹಿಂದೆ, ಮೊದಲ ಪತ್ರಿಕೆಯನ್ನು ಬರೆದಿರಬಹುದು. ಪ್ರಪಂಚದ ಎಲ್ಲಾ ಭಾಗಗಳಿಂದ ಪ್ರವಾಸಿಗರ ರೋಮಾಪುಕ್ಕೆ ಬರುತ್ತಿದ್ದರು. ಕೆಲವರು ಕ್ರೈಸ್ತರಾಗಿದ್ದರು, ಅವರ ಮೂಲಕವಾಗಿ ಆಸ್ಯ ಸೀಮೆಯಲ್ಲಿದ್ದ ಕ್ರೈಸ್ತರ ಹಿಂಸೆಗಳ ಕುರಿತಾಗಿ ಪೇತ್ರನು ತಿಳಿದು ಕೊಂಡಿದ್ದನು, ಈ ಒಂದು ಪರಿಸ್ಥಿತಿಯೇ ಪೇತ್ರನು ಈ ಪತ್ರವನ್ನು ಬರೆಯಲು ಕಾರಣವಾಯಿತು.

## ಓದುಗರು ಮತ್ತು ಅವರ ತಾಪತ್ರಯಗಳು

ಆಸ್ಯ ಸೀಮೆಯ ಉದ್ದಗಲಕ್ಕೂ ಇದ್ದವರನ್ನು ಕುರಿತು ಪೇತ್ರನು ತನ್ನ ಮೊದಲ ಪತ್ರಿಕೆಯಲ್ಲಿ ಬರೆದಿರುವನು, ಒಂದು ವೇಳೆ ಈಗಿನ ಟರ್ಕಿ ದೇಶದವರೆಗೂ ಇದ್ದ ಜನರ ಕುರಿತು ಬರೆದಿದ್ದಾನೆ. ಮೊದಲ ಮದ್ಯ ಶತಮಾನದಲ್ಲಿದ್ದ ಐದು ಪ್ರದೇಶಗಳಾದ 1 ಪೇತ್ರ 1:1ರಲ್ಲಿ, ಪೊಂತ, ಗಲಾತ್ಯ, ಕಪ್ಪದೋಕ್ಯ, ಆಸ್ಯ, ಬಿಥೂನ್ಯ, ಇವುಗಳು ರೋಮನ್ನರ ನಾಲ್ಕು ಪ್ರದೇಶಗಳಾಗಿದ್ದವು. ಪೊಂತದ ಹೆಚ್ಚು ಭಾಗವು ಬಿಥೂನ್ಯಕ್ಕೆ ಸೇರಿದ್ದವು. ಇದನ್ನು ರೋಮಾಪುರದ ಚಕ್ರವರ್ತಿಯಾದ ಪಾಂಪೆಯು ಮಾಡಿದ್ದನು, ಚಿಕ್ಕದಾದ ಪ್ರದೇಶಗ ಳನ್ನು ಗಲಾತ್ಯಕ್ಕೂ ಮತ್ತು ಕಪ್ಪದೋಕ್ಯಕ್ಕೂ ಸೇರಿಸಲಾಗಿತ್ತು. ಪೊಂತ - ಬಿಥೂನ್ಯವು ಆಸ್ಯ ಸೀಮೆಯ ಉತ್ತರದಿಂದ ಪಶ್ಚಿಮದವರೆಗೂ ಪ್ರಸರಿಸಿತ್ತು. ಅದು ಕಪ್ಪು ಸಮುದ್ರದ ತೀರ ಪ್ರದೇಶವಾಗಿತ್ತು. ಕಪ್ಪದೋಕ್ಯವು ಪೂರ್ವಪ್ರದೇಶವಾಗಿತ್ತು. ಅದು ನಿರ್ಜನ ಪ್ರದೇಶವಾಗಿದ್ದು, ಪ್ರವೇಶಿಸಲು ಕಷ್ಟವಾಗಿತ್ತು ಗಲಾತ್ಯವು ದಟ್ಟವಾದ ಕಳೆಗಳಿಂದ ಕೂಡಿತ್ತು. ಆಸ್ಯ ಸೀಮೆಯು ಸಮುದ್ರವಾದ ಪ್ರದೇಶವಾಗಿದ್ದು, ಏಗಿಯಾನ್ ಸಮುದ್ರದ ಪಶ್ಚಿಮದಲ್ಲಿತ್ತು, ಅದು ಸಮೃದ್ಧ ವಾದ ಗ್ರೀಕರ ಪಟ್ಟಣಗಳ್ನು ಒಳಗೊಂಡಿತ್ತು. ಕ್ರಿ.ಶ. 60ರ, ಮದ್ಯದಲ್ಲಿ ನಿರ್ಜನ ಪ್ರದೇಶದಲ್ಲಿದ್ದ ಪೊಂತ ಮತ್ತು ಕಪ್ಪದೋಕ್ಯ ಸಭೆಗಳು ಎಷ್ಟು ಬಲವುಳ್ಳದ್ದಾಗಿದ್ದವು ಎಂದು ತಿಳಿಯಲು ಕಷ್ಟ ವಾಗುತ್ತದೆ. ಆದರೆ ಪಂಚಾಶತ್ತಮ ದಿನದಂದು ಪೇತ್ರನು ಪ್ರಸಂಗಿಸುವಾಗ ಈ ಜನರು ಸಹ ಯೆರೂಸಲೇಮಿನಲ್ಲಿದ್ದರು (ಅಪೊಸ್ತಲರಕೃತಗಳು 2:9).

ಕ್ರೈಸ್ತರಿಗೂ ಮತ್ತು ಆ ದಿನಗಳಲ್ಲಿದ್ದ ಸಮಾಜದ ಬಹು ದೊಡ್ಡ ಸಮೂಹದವರ

ನಡುವೆ ಘರ್ಷಣೆ ಉಂಟಾಗಿತ್ತು. ಅವರ ನಂಬಿಕೆಯು ಬೆಂಕಿಯಿಂದ ಪರಿಶೋಧಿಸಲ್ಪಟ್ಟಿತು ಎಂದು ಪೇತ್ರನು ತಿಳಿಸಿದ್ದಾನೆ (1:7), ಅವರು ಪುಟಕ್ಕೆ ಹಾಕಲ್ಪಟ್ಟ ಸ್ಥಿತಿಯಲ್ಲಿ ಹಿಂಸೆಯನ್ನು ಅನುಭವಿಸುತ್ತಿದ್ದರು (4:12). ಅವರ ಹಿಂಸೆಯ ಮೂಲವನ್ನು ಸಲ್ಪವಾಗಿಯೇ ತಿಳಿಸಿದ್ದಾನೆ. ಅವರ ನೆರೆಹೊರೆಯವರ ಮೂಲಕವಾಗಿ ಅವರು ಅನುಭವಿಸಿದ ಹಿಂಸೆಯ ಕುರಿತು ಅನಧಿಕೃತವಾಗಿ ತಿಳುಕೊಂಡಿದ್ದನು, ಮತ್ತು ನೂತನವಾದ ಪಂಡಿತರುಗಳು ಅವರ ಗೌರವದ ನಿಮಿತ್ತವಾಗಿಯೂ, ಕಹಿಭಾವನೆಯ ನಿಮಿತ್ತವಾಗಿಯೂ, ಕ್ರೈಸ್ತರನ್ನು ಹಿಂಸಿಸಿ, ಅವರ ಮೇಲೆ ನಿಂದೆಯನ್ನು ಹೊರಿಸಿ, ಅವರನ್ನು ಅಧಿಕಾರಿಗಳ ಮುಂದೆ ತಂದು ನಿಲ್ಲಿಸಿರಬಹುದು. ಕೆಲವರನ್ನು ಹೊಡೆದರು; ಕೆಲವರನ್ನು ಸಂಹರಿಸಿದರು. ಕ್ರೈಸ್ತರು ಸಂತೋಷದಿಂದ ಅನುಭವಿಸಿದ್ದ ಮಹತ್ವದ ರಕ್ಷಣೆಯ ಬಗ್ಗೆ ಪೇತ್ರನು ಅವರಿಗೆ ನೆನಪು ಮಾಡಿದನು (1:2, 9). ಅವರು ರಕ್ಷಿಸಲ್ಪಟ್ಟು, ಪರಿಶುದ್ಧರಾಗ ಮಾಡಲ್ಪಟ್ಟಿದ್ದರು (1:15, 16, 18, 23). ಯೇಸುವು ತಿರುಗಿ ಬರುವದಕ್ಕಿದ್ದನು (1:7, 13; 4:7). ಹಿಂಸೆಯ ನಡುವೆ, ಸಂತೋಷಕ್ಕೆ ಕಾರಣವಿತ್ತು (1:8). ಎಲ್ಲಕ್ಕಿಂತ ಮಿಗಿಲಾಗಿ ಅನ್ಯರು ಅವರನ್ನು ದ್ವೇಶಿಸುವದಕ್ಕೆ ಅವರು ಅವಕಾಶವನ್ನು ನೀಡಬಾರದಿತ್ತು (2:12). ಅವರು ಪರಿಶುದ್ಧರಾಗಿ (2:1, 2), ಅವರ ಹಿಂಸೆಗೆ ವಿರುದ್ಧವಾಗಿ ಕರುಣೆಯನ್ನು ತೋರಬೇಕಿತ್ತು (3:9). ಅವರು ಅನುಭವಿಸುತ್ತಿದ್ದ ಹಿಂಸೆಯು, ಅವರನ್ನು ನಂಬಿಕೆಯಲ್ಲಿ ಭಲಪಡಿಸಿ ಯೇಸು ಕ್ರಿಸ್ತನು ಮಾನವರ ರಕ್ಷಕನು ಎಂದು ಅವರನ್ನು ಸಾಕ್ಷಿಗಳನ್ನಾಗಿ ಮಾಡಿತ್ತು (1:7).

---

## 1 ಪೇತ್ರನ ಪತ್ರಿಕೆಯ ಮುಖ್ಯ ಅಂಶಗಳು

ಈ ಮುಖ್ಯವಾದ ಅಂಶಗಳನ್ನು ಪರಿಶೀಲಿಸುವಾಗ, ಈ ಪತ್ರದ ಎರಡು ವಿಶೇಷವಾದ ವಿಷಯಗಳನ್ನು ನೆನಪಿನಲ್ಲಿಡಿರಿ: (1) ಕ್ರೈಸ್ತರಾಗಿ ಜೀವಿಸುವಾಗ, ಹಿಂಸೆಯು ಸಹಜವಾದ ಸಂಗತಿಯಾಗಿರುತ್ತದೆ. (2) ಕರ್ತನು ತನ್ನವರನ್ನು ಸೆಳಕೊಳ್ಳಲು ತಿರುಗಿ ಬರುವವನಾಗಿದ್ದಾನೆ.

ವಂದನಾರ್ಪಣೆ: ಪೇತ್ರನಿಂದ ದೇವರಾದು ಕೊಂಡವರಿಗೆ (1:1, 2)

I. ಜೀವವುಳ್ಳ ನಿರೀಕ್ಷೆಯಲ್ಲಿ ಆನಂದಿಸಿರಿ (1:3-12).
   A. ಯೇಸು ಜೀವಿಸುತ್ತಿರುವದರಿಂದ ನಿರೀಕ್ಷೆಯು ಜೀವಿಸುತ್ತದೆ (1:3-5).
   B. ಹಿಂಸೆಯ ನಡುವೆ ಸಂತೋಷವು ಜೀವಿಸುತ್ತದೆ (1:6-9).
   C. ಪ್ರವಾದಿಗಳ ಸೇವೆಯ ಮುಖಾಂತರ ಪ್ರೋತ್ಸಾಹವು ಜೀವಿಸುತ್ತದೆ (1:10-12).

II. "ನಾನು ಪರಿಶುದ್ಧನಾಗಿರುವಂತೆ, ನೀವೂ ಪರಿಶುದ್ಧರಾಗಿರಬೇಕು" (1:13-25).
   A. ಪರಿಶುದ್ಧವಾದ ಮಕ್ಕಳಂತೆ ವಿಧೇಯರಾಗಿರ್ರಿ (1:13-17)
   B. ಕ್ರಿಸ್ತನ ರಕ್ತದಿಂದ ಬಿಡುಗಡೆ ಹೊಂದಿದ್ದೇವೆ (1:18-21)
   C. ನಾಶವಾಗದ ಬೀಜದಿಂದ ಹುಟ್ಟಿದವರು (1:22-25)

III. ಚೀಯೋನಿನಲ್ಲಿ ಬುನಾದಿಯಾಗಿರುವ ಕಲ್ಲಿನ ಮೇಲೆ ಭರವಸವಿಡಿರಿ (2:1-10).
   A. ಹೊಸದಾಗಿ ಹುಟ್ಟಿರುವ ಮಕ್ಕಳಿಗೆ ಪಾರಮಾರ್ಥಿಕವಾದ ಹಾಲು (2:1-3)
   B. ಮನುಷ್ಯರಿಂದ ತಿರಸ್ಕರಿಸಲ್ಪಟ್ಟ ಕಲ್ಲು ದೇವರಿಂದ ಆಯಲ್ಪಟ್ಟದ್ದಾಗಿದೆ (2:4-8)
   C. ರಾಜವಂಶಸ್ಥರಾದ ಯಾಜಕರು, ಪರಿಶುದ್ಧ ಜನಾಂಗ (2:9, 10)

IV. ಅಧೀನರಾಗಿದ್ದು ದೈವಭಕ್ತಿಯ ಜೀವಿತವನ್ನು ಜೀವಿಸಿರಿ (2:11-25).
   A. ನಿಂದೆಗೆ ಒಳಗಾಗದಂತೆ ದೈವಭಕ್ತಿಯ ಜೀವಿತವನ್ನು ಜೀವಿಸಿರಿ (2:11, 12).
   B. ಒಳ್ಳೆದನ್ನು ಮಾಡಿ, ಮೂಢರ ಬಾಯನ್ನು ಕಟ್ಟಿರಿ (2:13-17).
   C. ಕರ್ತನ ಮಾದರಿಯನ್ನು ಅನುಸರಿಸಿ (2:18-25).

V. ನೀವು ಉತ್ತಮರಾಗಿದ್ದು ಪರಾಸಕ್ತಿಯುಳ್ಳವರಾಗಿರಿ (3:1-7).
   A. ಶಾಂತ ಮನಸ್ಸೆಂಬ ಒಳಗಣ ಭೂಷಣ (3:1-4)
   B. ಪೂರ್ವಕಾಲದಲ್ಲಿ ದೈವಭಕ್ತೆಯರಾಗಿದ್ದ ಸ್ತ್ರೀಯರ ಮಾದರಿ (3:5, 6)
   C. ಮನುಷ್ಯರಂತೆ ವರ್ತಿಸಿ ಮತ್ತು ಗೌರವಿಸಿ (3:7)

VI. ಕೇಳುವ ಪ್ರತಿಯೊಬ್ಬನಿಗೂ ಪ್ರತ್ಯುತ್ತರಿಸಿರಿ (3:8-22).
   A. ನಿಂದೆಗೆ ಆಶೀರ್ವಾದದ ಉತ್ತರ ನೀಡಿರಿ (3:8-12)
   B. ದುರುದ್ದೇಶವುಳ್ಳವರಿಗೆ ನ್ಯಾಯವಾದ ಉತ್ತರ ನೀಡಿರಿ (3:13-17)
   C. ದೋಷಾರೋಪಣೆ ಮಾಡುವವರಿಗೆ ಕ್ರಿಸ್ತನ ಶಿಲುಬೆಯ ಮೂಲಕ ಉತ್ತರಿಸಿ (3:18-22)

VII. ಸಕಲ ವಿಷಯದಲ್ಲೂ ದೇವರನ್ನು ಮಹಿಮೆ ಪಡಿಸಿರಿ (4:1-11).
   A. ಕ್ರಿಸ್ತನ ಉದ್ದೇಶಗಳನ್ನು ಧರಿಸಿಕೊಂಡು ಸಿದ್ಧವಾಗಿರಿ (4:1-3).
   B. ಚದರಿಸುವದರ ಜೀವಿತವನ್ನು ತಿರಸ್ಕರಿಸಿರಿ (4:4-6).
   C. ಎಲ್ಲವುಗಳ ಅಂತ್ಯವನ್ನೂ ಹತ್ತಿರವಾಯಿತು ಎಂದು ಅರಿತುಕೊಳ್ಳಿರಿ (4:7-11).

VIII. ಕ್ರಿಸ್ತನ ವೇದನೆಗಳಲ್ಲಿ ಪಾಲುಗಾಗರರಾಗಿರಿ (4:12-19).
   A. ಬಾದೆಯ ಕುರಿತು ಆಶ್ಚರ್ಯಪಡಬೇಡಿರಿ (4:12-15).
   B. ಅತನ ಹೆಸರಿನ ನಿಮಿತ್ತ ನಾಚಿಕೆ ಪಡಬೇಡಿರಿ (4:16-18).
   C. ನಂಬಿಗಸ್ತನಾದ ಸೃಷ್ಟಿಕರ್ತನಿಗೆ ನಿಮ್ಮನ್ನು ಸಮರ್ಪಿಸುವದಕ್ಕೆ ಅಂಜಬೇಡಿರಿ (4:19).

IX. ವಿನಯತೇ ಎಂಬ ವಸ್ತ್ರವನ್ನು ಧರಿಸಿಕೊಳ್ಳಿರಿ (5:1-11).
   A. ಜೊತೆ ಹಿರಿಯರಿಗೆ ಒಂದು ಮನವಿ (5:1-4)
   B. ಚಿಂತಾಚಾರಗಳನ್ನು ಕರ್ತನ ಮೇಲೆ ಹಾಕಿರಿ ಎಂಬ ಮನವಿ (5:5-7)
   C. ಸಹೋದರತ್ವದಲ್ಲಿ ಒಟ್ಟಾಗಿ ನಿಲ್ಲಿರಿ ಎಂಬ ಮನವಿ (5:8-11)

ಮುಕ್ತಾಯ: ವೈಯಕ್ತಿಕವಾದ ವಂದನೆಗಳು (5:12-14)